CC 2335/2022
CW-2 PW-2

**<u>ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ. ಎ.ಸಿ.ವೈ. ವಕೀಲರಿಂದಃ</u>**

ಆರೋಪಿಯ ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ಒಂದು ದಾವೆ ಚಾಲ್ತಿಯಲ್ಲಿದೆ ಅಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರಿದ ನಿವೇಶನದಲ್ಲಿ ಕಾರ್ ಶೆಡ್ ಇದೆ ಅಂದರೆ ಸರಿ. ನಾನು ವಕೀಲನಾಗಿ ಸೊರಬ ನ್ಯಾಯಾಲಯದಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದೇನೆ. 3 ನೇ ಆರೋಪಿತಳು ವಿದ್ಯಾಭ್ಯಾಸ ಮಾಡುತ್ತಾರೆ ಅಂದರೆ ನನಗೆ ಗೊತ್ತಿಲ್ಲ. 4 ನೇ ಆರೋಪಿಯು ಶಿವಮೊಗ್ಗದವರು ಅಂದರೆ ಸರಿ. 2 ನೇ ಆರೋಪಿತನ ಮನೆಯ ಪಕ್ಕದಲ್ಲಿ 5 ನೇ ಆರೋಪಿತನು ವಾಸವಾಗಿರುತ್ತಾರೆ. ನಾನು ಹೇಳುವಂತ ಘಟನಾ ದಿನ ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಪೊಲೀಸರು ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಹೇಳುವಂತ ಘಟನಾ ದಿನ ನಾನು ಮತ್ತು ಚಾಸಾ–1 ರವರು ಘಟನಾ ಸ್ಥಳಕ್ಕೆ ರಾತ್ರಿ 9.00 ರಿಂದ 9.10 ಕ್ಕೆ ಹೋಗಿರುತ್ತೇವೆ ಅಂದರೆ ಸರಿ. ನಮ್ಮ ಮನೆಯ ಮುಂಭಾಗ ಮತ್ತು ನಮ್ಮ ಅಂಗಡಿಯ ಮುಂಭಾಗದಲ್ಲಿ ಸಿ.ಸಿ.ಕ್ಯಾಮೇರಾಗಳು ಇವೆ ಅಂದರೆ ಸರಿ. 1 ಮತ್ತು 2 ನೇ ಆರೋಪಿತರ ಅಂಗಡಿಯ ಮುಂಭಾಗದಲ್ಲಿ ಒಂದು ಸಿ.ಸಿ. ಕ್ಯಾಮೇರಾ ಇದೆ ಅಂದರೆ ನನಗೆ ಗೊತ್ತಿಲ್ಲ. ನಾನು ಹೇಳುವಂತ ಘಟನಾ ಸ್ಥಳಕ್ಕೆ ರಾತ್ರಿ 9.13 ನಿಮಿಷಕ್ಕೆ ಹೋಗಿರುತ್ತೀರಿ ಅಂದರೆ ಇರಬಹುದು. ಸದರಿ ಘಟನೆಯು ಆರೋಪಿಯ ಮನೆಯ ಸಿ.ಸಿ. ಕ್ಯಾಮೇರಾದಲ್ಲಿ

ರೆಕಾರ್ಡ್ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಂತರ ನಾನು ಹೇಳುವಂತ ಘಟನಾ ಸ್ಥಳದಿಂದ 13 ನಿಮಿಷಗಳ ನಂತರ ನಾನು ಮತ್ತು ಚಾಸಾ–1 ರವರು ಸ್ಥಳದಿಂದ ಕಾರಿನಲ್ಲಿ ಹೋಗಿರುತ್ತೇವೆ ಅಂದರೆ ಸರಿ. ಅಲ್ಲಿ ಬೇರೆ ಯಾರೂ ವ್ಯಕ್ತಿಗಳು ಇರಲಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತ ಘಟನಾ ದಿನ ಆರೋಪಿತರು ಘಟನಾ ಸ್ಥಳಕ್ಕೆ ಬಂದಿದ್ದಾಗಲಿ, ಹಲ್ಲೆ ಮಾಡಿದ್ದಾಗಲಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. 4 ನೇ ಆರೋಪಿತರು ಶಿವಮೊಗ್ಗದಲ್ಲಿರುವುದರಿಂದ ಆ ದಿನ ಘಟನಾ ಸ್ಥಳದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತ ಘಟನಾ ದಿನ ಘಟನಾ ಸ್ಥಳಕ್ಕೆ ಬರುವ ಪೂರ್ವದಲ್ಲಿ ಆರೋಪಿತರ ಮನೆಯ ಮುಂದೆ ಒಂದು ಕಾರು ನಿಂತಿರುತ್ತದೆ ಅಂದರೆ ಸರಿಯಲ್ಲ. ಅದನ್ನು ನೋಡಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ನಾನು ಹೇಳುವಂತಹ ಘಟನಾ ದಿನ 3 ನೇ ಆರೋಪಿತಳು ಸ್ಥಳದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಹೇಳುವಂತ ಕಾರ್ ಶೆಡ್ ನ ಪಶ್ಚಿಮ ಭಾಗದಲ್ಲಿ 2 ಅಡಿ ಜಾಗವನ್ನು ಬಿಟ್ಟು ಶೆಡ್ ನ್ನು ನಿರ್ಮಿಸಿರುತ್ತೇವೆ. ಆರೋಪಿತರ ಮನೆಯ ಕೆಳಗಡೆ ಗೋಡೆಗೂ ಶೆಡ್ ಗೂ ಸುಮಾರು 5 ಅಡಿ ಅಂತರ ಇದೆ. ನಾನು ಆ ದಿನ ಕಾರಿನ ಬಾಗಿಲನ್ನು ತೆಗೆಯುವಾಗ ಘಟನೆ ನಡೆದಿರುತ್ತದೆ. ನಂತರ ನಾನು ಹೋಗಿ ಗಲಾಟೆಯನ್ನು ಬಿಡಿಸಿರುತ್ತೇನೆ. ಆರೋಪಿತರ ಮನೆಯಲ್ಲಿ 2 ನೇ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಗಂಡು ಮಕ್ಕಳು ಇಲ್ಲ ಅಂದರೆ ನನಗೆ ಗೊತ್ತಿಲ್ಲ. ಆ ಕಾರಣ ನಮ್ಮ ಮೇಲೆ ಗಲಾಟೆ

ಮಾಡುವ ಸಾಮರ್ಥ್ಯ ಇಲ್ಲ ಅಂದರೆ ಸರಿಯಲ್ಲ. ನಾವೇ ಅವರ ಮೇಲೆ ಗಲಾಟೆ ಮಾಡಿ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ನಾನು ಹೇಳುವಂತಹ ದಿನ ಆರೋಪಿತರು ನಮ್ಮ ಮೇಲೆ ಯಾವುದೇ ಗಲಾಟೆ ಮಾಡಿರುವುದಿಲ್ಲ. ಚಾಸಾ–1 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು ಚಾಸಾ–1 ರವರು ಆ ದಿನ 9.00 ಗಂಟೆಗೆ ಬಂದು 9.20 ಕ್ಕೆ ಕಾರಿನಿಂದ ಹೋಗಿರುತ್ತೇವೆ ಅಂದರೆ ಸರಿಯಲ್ಲ. ನಮ್ಮ ಕಾರಿನ ಶೆಡ್ ನ ಪೂರ್ವ ಭಾಗದಲ್ಲಿ 3 ಅಡಿ ಜಾಗವನ್ನು ಬಿಟ್ಟಿರುತ್ತೇವೆ. ಸದರಿ ಶೆಡ್ ನ ಉತ್ತರ ಭಾಗಕ್ಕೆ ರಸ್ತೆಯಿಂದ ಸುಮಾರು 10 ಅಡಿ ಖಾಲಿ ಜಾಗ ಇದೆ. ನಿಪಿ–3 ರಲ್ಲಿ ಕಾಣುವ ಕಾರಿನ ಶೆಡ್ ಆರೋಪಿತರ ಮನೆಯ ಕೌಪೌಂಡ್ ನವರೆಗೂ ಬರುತ್ತದೆ ಅಂದರೆ ಸರಿಯಲ್ಲ. ನಾನು ಹೇಳುವಂತಹ ಆರೋಪಿತರು ನನ್ನ ಮೇಲೆ, ಚಾಸಾ–1 ರವರ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿತರು ನನ್ನ ವಿರುದ್ದ ಅದೇ ದಿನ ಒಂದು ದೂರನ್ನು ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ರಾಜಿ ಮಾಡಿಕೊಳ್ಳಲಿಲ್ಲ ಎಂಬ ಉದ್ದೇಶಕ್ಕಾಗಿ ಆರೋಪಿತರ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಗಲಾಟೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**